ವರದಿ ಮಾಡಬಹುದಾಗಿದೆ

ಭಾರತದ ಸರ್ವೋಚ್ಚ ನ್ಯಾಯಾಲಯ

ಕ್ರಿಮಿನಲ್ ಮೇಲ್ಮನವಿ ಅಧಿಕಾರ ವ್ಯಾಪ್ತಿ

ಕ್ರಿಮಿನಲ್ ಅಪೀಲ್ ನಂ. 2023

(ವಿಶೇಷ ಅನುಮತಿ ಅರ್ಜಿ (Crl) 2022 ರ ಸಂಖ್ಯೆ 6572 ರಿಂದ ಉದ್ಭವಿಸುತ್ತದೆ)

ಸೀಮಂತ್ ಕುಮಾರ್ ಸಿಂಗ್ ..... ಅಪೀಲುದಾರ

ವಿರುದ್ಧ

ಮಹೇಶ್ ಪಿ & ಇತರರು. ..... ಪ್ರತಿವಾದಿಗಳು

ಇದರೊಂದಿಗೆ

ಕ್ರಿಮಿನಲ್ ಅಪೀಲ್ ನಂ. 2023

(ವಿಶೇಷ ಅನುಮತಿ ಅರ್ಜಿ (Crl) 2022 ರ ಸಂಖ್ಯೆ 6253 ರಿಂದ ಉದ್ಭವಿಸುತ್ತದೆ)

ಕರ್ನಾಟಕ ರಾಜ್ಯ ..... ಅಪೀಲುದಾರ

ವಿರುದ್ಧ

ಮಹೇಶ್ ಪಿ. ಎಸ್. & ಎಎನ್ಆರ್. ..... ಪ್ರತಿವಾದಿಗಳು

ಇದರೊಂದಿಗೆ

ಕ್ರಿಮಿನಲ್ ಅಪೀಲ್ ನಂ. 2023

(ವಿಶೇಷ ಅನುಮತಿ ಅರ್ಜಿ (Crl) 2022 ರ ಸಂಖ್ಯೆ 6573 ರಿಂದ ಉದ್ಭವಿಸುತ್ತದೆ)

ಜೆ . ಮಂಜುನಾಥ್ ..... ಮೇಲ್ಮನವಿದಾರರು

ವಿರುದ್ಧ

ಕರ್ನಾಟಕ ರಾಜ್ಯ ಮತ್ತು ಇತರರು. ..... ಪ್ರತಿವಾದಿಗಳು

ತೀರ್ಪು

<u>ಕೃಷ್ಣ ಮುರಾರಿ. ನ್ಯಾ.</u>

ಅನುಮತಿ ನೀಡಲಾಗಿದೆ.

2. ಪ್ರಸ್ತುತ ಮೂರು ಮೇಲ್ಮನವಿಗಳು 2022 ರ ಕ್ರಿಮಿನಲ್ ಅರ್ಜಿ ಸಂಖ್ಯೆ 4909 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ (ಇನ್ನು ಮುಂದೆ "ಉಚ್ಚ ನ್ಯಾಯಾಲಯ" ಎಂದು ಉಲ್ಲೇಖಿಸಲಾಗಿದೆ) 07.07.2022 ರ ಮಧ್ಯಂತರ ಆದೇಶದ ವಿರುದ್ಧ ನಿರ್ದೇಶಿಸಲಾಗಿದೆ, ಈ ಮೂಲಕ ಉಚ್ಚ ನ್ಯಾಯಾಲಯ ಏಕಸದಸ್ಯ ನ್ಯಾಯಾಧೀಶ ರಿಂದ ಮೇಲ್ಮನವಿದಾರರ ವಿರುದ್ಧ ಪ್ರತಿಕೂಲ ಹೇಳಿಕೆಗಳನ್ನು ಮಾಡಲಾಗಿದೆ, ಮತ್ತು ಮೇಲ್ಮನವಿದಾರರೊಬ್ಬರ ಹಿಂದಿನ ದಾಖಲೆಗಳನ್ನು ತನಿಖೆ ಮಾಡಲು ಸಿಬಿಐಗೆ ನಿರ್ದೇಶನವನ್ನು ನೀಡಲಾಯಿತು.

3. 2022 ರ ಎಸ್.ಎಲ್.ಪಿ. (CRL.) ಸಂಖ್ಯೆ. 6253 ರಲ್ಲಿ ಕರ್ನಾಟಕ ರಾಜ್ಯವು ಮೇಲ್ಮನವಿದಾರರು (ಇನ್ನು ಮುಂದೆ ಮೇಲ್ಮನವಿದಾರರು ಸಂಖ್ಯೆ 1 ಎಂದು ಉಲ್ಲೇಖಿಸಲಾಗಿದೆ) , ಮತ್ತು 2022 ರ ಎಸ್ .ಎಲ್.ಪಿ. ಸಂಖ್ಯೆ 6572 ರಲ್ಲಿ ಒಬ್ಬ ಶ್ರೀ ಸೀಮಂತ್ ಕುಮಾರ್ ಮೇಲ್ಮನವಿದಾರರು (ಇನ್ನು ಮುಂದೆ ಮೇಲ್ಮನವಿದಾರ ಸಂಖ್ಯೆ 2 ಎಂದು ಉಲ್ಲೇಖಿಸಲಾಗಿದೆ), 26 ವರ್ಷಗಳ ಸೇವಾನುಭವ ಹೊಂದಿದ ಹಿರಿಯ ಐ.ಪಿ.ಎಸ್. ಅಧಿಕಾರಿ ಮತ್ತು ಪ್ರಸ್ತುತ ಭ್ರಷ್ಟಾಚಾರ ವಿರೋಧಿ ಬ್ಯೂರೋದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಾಗಿದ್ದಾರೆ. 2022 ರ ಎಸ್.ಎಲ್.ಪಿ. (ಕ್ರಿಮಿನಲ್) 6573 ರಲ್ಲಿ ಒಬ್ಬ ಶ್ರೀ. ಜೆ. ಮಂಜುನಾಥ್ ರವರು ಮೇಲ್ಮನವಿದಾರರಾಗಿದ್ದು, (ಇನ್ನು ಮುಂದೆ ಮೇಲ್ಮನವಿದಾರ ಸಂಖ್ಯೆ 3 ಎಂದು ಉಲ್ಲೇಖಿಸಲಾಗುತ್ತದೆ), ಬೆಂಗಳೂರು ನಗರದ ಜಿಲ್ಲಾಧಿಕಾರಿಯಾಗಿದ್ದಾರೆ. ಪ್ರತಿವಾದಿಗಳಾದ ಮಹೇಶ್ ಪಿ.ಎಸ್. (ಇಲ್ಲಿ ಇನ್ನು ಮುಂದೆ ಪ್ರತಿವಾದಿ ಸಂಖ್ಯೆ 1 ಎಂದು ಉಲ್ಲೇಖಿಸಲಾಗಿದೆ).

4. ಸಂಕ್ಷಿಪ್ತವಾಗಿ, ಪ್ರಸ್ತುತ ಮೇಲ್ಮನವಿಗಳಿಗೆ ಸಂಬಂಧಿಸಿದ ಸಂಗತಿಗಳೆಂದರೆ, ಲಂಚ ಪಡೆದಿದ್ದಾರೆಂದು ಆರೋಪಿಸಲಾದ ಪೊಲೀಸ್ ಅಧಿಕಾರಿಯಾದ ಪ್ರತಿವಾದಿ ಸಂಖ್ಯೆ 1 ರವರ ಜಾಮೀನು ಪ್ರಕ್ರಿಯೆಯು ಬಾಕಿ ಇರುವಾಗ, ಉಚ್ಚ ನ್ಯಾಯಾಲಯವು ದಿನಾಂಕ : 07.07.2022 ರ ಮಧ್ಯಂತರ ಆದೇಶವನ್ನು ಮೇಲೆ ತಿಳಿಸಿದ ಜಾಮೀನು ಪ್ರಕ್ರಿಯೆಯಲ್ಲಿ ಯಾವುದೇ ದಾವೆ ಇರದ ಮೇಲ್ಮನವಿದಾರರ ವಿರುದ್ಧ ಪ್ರತಿಕೂಲ ಷರಾಗಳನ್ನು ಹೊರಡಿಸಿದೆ.

5. 20.05.2022 ರಂದು, ಮಾಹಿತಿದಾರರಿಂದ ಲಂಚ ಕೇಳಿದ ಆರೋಪದ ಮೇಲೆ ಪ್ರತಿವಾದಿ ಸಂಖ್ಯೆ 1 ರವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯ ಕಲಂ 7(ಎ) ರಡಿಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿತ್ತು. ಪ್ರತಿವಾದಿ ಸಂಖ್ಯೆ 1 ರವರನ್ನು ನಂತರ ವಶಕ್ಕೆ ತೆಗೆದುಕೊಳ್ಳಲಾಗಿತ್ತು.

6. ನಂತರ, ಪ್ರತಿವಾದಿ ಸಂಖ್ಯೆ 1 ರವರು ಉಚ್ಚ ನ್ಯಾಯಾಲಯದಲ್ಲಿ ಕಲಂ 439 ದಂಡಪ್ರಕ್ರಿಯ ಸಂಹಿತೆಯಡಿಯಲ್ಲಿ ಜಾಮೀನು ಅರ್ಜಿಯನ್ನು ಸಲ್ಲಿಸಿದರು. ಈ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದಿಂದ ನೋಟೀಸ್ ಜಾರಿ ಮಾಡಲಾಗಿತ್ತು ಮತ್ತು 22.06.2022 ರಂದು ಜಾಮೀನು ಪ್ರಕ್ರಿಯೆಯ ಸಂದರ್ಭದಲ್ಲಿ, ಇಲ್ಲಿನ ಮೇಲ್ಮನವಿದಾರರ ವಿರುದ್ಧ ನ್ಯಾಯಾಲಯಕ್ಕೆ ಹಾಜರಾಗುವಂತೆ ಕೋರಿ ಉಚ್ಚ ನ್ಯಾಯಾಲಯ ಮೌಖಿಕ ಸಮನ್ಸ್ ಜಾರಿ ಮಾಡಿತ್ತು. ಮೇಲ್ಮನವಿದಾರ ಸಂಖ್ಯೆ 1 ಮತ್ತು ಮೇಲ್ಮನವಿದಾರ ಸಂಖ್ಯೆ 2 ರವರು ಈ ಪ್ರಕರಣದಲ್ಲಿ ಆರೋಪಿಗಳಾಗಿರುವುದಿಲ್ಲ ಮತ್ತು ಜಾಮೀನು ಪ್ರಕ್ರಿಯೆಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ.

7. ಅದೇ ಜಾಮೀನು ಪ್ರಕ್ರಿಯೆಯ ಸಮಯದಲ್ಲಿ, 04.07.2022 ರಂದು, ಉಚ್ಚ ನ್ಯಾಯಾಲಯ ಇದರಲ್ಲಿ ಮೇಲ್ಮನವಿದಾರರ ವಿರುದ್ಧ ಪ್ರತಿಕೂಲವಾದ ಹೇಳಿಕೆಗಳನ್ನು ನೀಡಿತ್ತು. ಉಚ್ಚ ನ್ಯಾಯಾಲಯದ ಈ ಪ್ರತಿಕೂಲ ಷರಾಗಳು ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿದ್ದವು ಮತ್ತು ಮೇಲ್ಮನವಿದಾರರ ಪ್ರತಿಷ್ಠೆಗೆ ಹಾನಿಯನ್ನುಂಟುಮಾಡಿದ್ದವು.

8. ತರುವಾಯ, ದಿನಾಂಕ 07.07.2022 ರಂದು, ಉಚ್ಚ ನ್ಯಾಯಾಲಯವು ಮೇಲ್ಮನವಿದಾರರ ವಿರುದ್ಧ ಮತ್ತಷ್ಟು ಪ್ರತಿಕೂಲವಾದ ಷರಾಗಳನ್ನು ಮಾಡುವುದರ ಜೊತೆಗೆ, ಮೇಲ್ಮನವಿದಾರರ ಸಂಖ್ಯೆ 2 ರವರಿಗೆ ವಿಚಾರ ತಿಳಿಸಲು ಒಂದು ಅವಕಾಶ ನೀಡದೇ, ಮೇಲ್ಮನವಿದಾರರ ಸಂಖ್ಯೆ 2 ರವರ ವಿರುದ್ಧ ನಡೆಸಿದ ಹಿಂದಿನ ತನಿಖೆಗಳ ವರದಿಯನ್ನು ಸಲ್ಲಿಸುವಂತೆ ಸಿ.ಬಿ.ಐ.ಗೆ ನಿರ್ದೇಶನವನ್ನೂ ಸಹ ನೀಡಿತು.

9. ಆದಾಗ್ಯೂ, ಮೇಲ್ಮನವಿದಾರ ಸಂಖ್ಯೆ 3 ರವರು ಇತರ ಮೇಲ್ಮನವಿದಾರರಿಗಿಂತ ಸ್ವಲ್ಪ ವಿಭಿನ್ನವಾದ ನೆಲೆಯಲ್ಲಿ ಇರುತ್ತಾರೆ, ಆರಂಭಿಕ ತನಿಖೆಯ ನಂತರ, ಮೇಲ್ಮನವಿದಾರ ಸಂಖ್ಯೆ 3 ರವರನ್ನು ಮೇಲ್ಕಂಡ ಪ್ರಕರಣದಲ್ಲಿ ಆರೋಪಿ ಎಂದು ನಿರೂಪಿಸಲಾಗಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ. ಅದೇ ಸಮಯದಲ್ಲಿ, ಮೇಲ್ಮನವಿದಾರ ಸಂಖ್ಯೆ 3 ರವರು ಮೇಲಿನ ಅಪರಾಧದಲ್ಲಿ ಆರೋಪಿಯಾಗಿದ್ದರೂ, ಉಚ್ಚ ನ್ಯಾಯಾಲಯದ ಮೇಲ್ಕಂಡ ಜಾಮೀನು ಪ್ರಕ್ರಿಯೆಯಲ್ಲಿ ಪಕ್ಷಕಾರನಾಗಿರಲಿಲ್ಲ ಎಂಬುವುದನ್ನೂ ಸಹ ಗಮನದಲ್ಲಿಟ್ಟುಕೊಳ್ಳಬೇಕು.

10. ಈ ನ್ಯಾಯಾಲಯದ ಮುಂದೆ ಸಲ್ಲಿಸಲಾದ ಪ್ರಸ್ತುತ ಮೇಲ್ಮನವಿಗಳ ಮೂಲಕ, ಮೇಲ್ಮನವಿದಾರರು ತಮ್ಮ ವಿರುದ್ಧ ಉಚ್ಚ ನ್ಯಾಯಾಲಯವು ಮಾಡಿದ ಷರಾಗಳನ್ನು ತೆಗೆದುಹಾಕಲು ಕೋರುತ್ತಾರೆ.

<u>ಪ್ರಸ್ತುತ ಮೇಲ್ಮನವಿಗಳಿಗೆ ಸಂಬಂಧಿಸಿದ ಪ್ರಶ್ನೆಗಳು</u>

11. ಮೊದಲನೆಯದಾಗಿ, ಪ್ರಸ್ತುತ ಮೇಲ್ಮನವಿಗಳಲ್ಲಿ, ಮೇಲ್ಮನವಿದಾರರ ವಿರುದ್ಧ ಉಚ್ಚ ನ್ಯಾಯಾಲಯವು ಮಾಡಿದ ಪ್ರತಿಕೂಲವಾದ ಷರಾಗಳು ಮತ್ತು ಮೇಲ್ಮನವಿದಾರರ ಸಂಖ್ಯೆ 2 ರವರ ವಿರುದ್ಧ ಸಿ.ಬಿ.ಐ. ವಕೀಲರಿಗೆ ಹೊರಡಿಸಿದ ನಂತರದ ನಿರ್ದೇಶನಗಳ ಬಗ್ಗೆ ಮಾತ್ರ ನಾವು ಗಮನವಹಿಸುತ್ತೇವೆ ಎಂಬುದನ್ನು ಸ್ಪಷ್ಟಪಡಿಸಲು ನಾವು ಬಯಸುತ್ತೇವೆ. ಪ್ರತಿವಾದಿ ಸಂಖ್ಯೆ 1 ರವರು ಜಾಮೀನಿಗಾಗಿ ಕೋರಿದ ಪ್ರಸ್ತುತ ಮನವಿಯನ್ನು ಈ ನ್ಯಾಯಾಲಯವು ಪರಿಗಣಿಸುತ್ತಿಲ್ಲ ಮತ್ತು ಅದರ ವಿಚಾರಣೆ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿವೆ.

12. ಮೇಲಿನ ಕಲಾಪಗಳ ನಂತರ, ಈ ನ್ಯಾಯಾಲಯವು ಪ್ರಸ್ತುತ ಮೇಲ್ಮನವಿಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿಯನ್ನು ಹೊಂದಿದೆ.

I. ಪ್ರತಿವಾದಿ ಸಂಖ್ಯೆ 1 ರವರ ಜಾಮೀನು ವಿಚಾರಣೆಯ ಸಮಯದಲ್ಲಿ ಮೇಲ್ಮನವಿದಾರರ ವಿರುದ್ಧ ಉಚ್ಚ ನ್ಯಾಯಾಲಯವು ಮಾಡಿದ ಪ್ರತಿಕೂಲ ಷರಾಗಳನ್ನು ತೆಗೆದುಹಾಕತಕ್ಕದ್ದೇ?

II. ಪ್ರತಿವಾದಿ ಸಂಖ್ಯೆ 1 ರ ಜಾಮೀನು ವಿಚಾರಣೆಯ ಸಮಯದಲ್ಲಿ, ಮೇಲ್ಮನವಿದಾರ ಸಂಖ್ಯೆ 2 ರವರ ವಿರುದ್ಧ ವರದಿ ಪಡೆಯಲು ಉಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನವನ್ನು ರದ್ದುಗೊಳಿಸಬಹುದೇ?

<u>ವಿಶ್ಲೇಷಣೆ</u>

ಪ್ರಶ್ನೆ 1- ಪ್ರತಿವಾದಿ ಸಂಖ್ಯೆ 1 ರವರ ಜಾಮೀನು ವಿಚಾರಣೆಯ ಸಮಯದಲ್ಲಿ ಉಚ್ಚ ನ್ಯಾಯಾಲಯವು ಮಾಡಿದ ಪ್ರತಿಕೂಲ ಷರಾಗಳನ್ನು ತೆಗೆದುಹಾಕತಕ್ಕದ್ದೇ?

13. ಉಚ್ಚ ನ್ಯಾಯಲಯವು, 04.07.2022 ಮತ್ತು 07.07.2022 ರಂದು, ಎರಡು ಪ್ರತ್ಯೇಕ ಸಂದರ್ಭಗಳಲ್ಲಿ, ಪ್ರತಿವಾದಿ ಸಂಖ್ಯೆ 1 ರ ಜಾಮೀನು ಪ್ರಕ್ರಿಯೆಯಲ್ಲಿ, ಇದರಲ್ಲಿನ ಮೇಲ್ಮನವಿದಾರರ ವಿರುದ್ಧ ಪ್ರತಿಕೂಲ ಷರಾಗಳನ್ನು ಮಾಡಿದ್ದು, ಇದು ಅವರ ಪ್ರತಿಷ್ಠೆಗೆ ದೊಡ್ಡ ಹಾನಿಯನ್ನುಂಟುಮಾಡಿದೆ ಎಂದು ಹೇಳಲಾಗುತ್ತದೆ. ಉಚ್ಚ ನ್ಯಾಯಾಲಯದ ಯೂಟ್ಯೂಬ್ ಚಾನೆಲ್ನಲ್ಲಿ ಕಲಾಪಗಳು ಪ್ರಸಾರವಾಗುತ್ತಿರುವುದರಿಂದ, ಸದರಿ ಟೀಕೆಗಳು ವ್ಯಾಪಕ ಪ್ರಚಾರ ಪಡೆದಿವೆ ಮತ್ತು ಹಲವಾರು ಮಾಧ್ಯಮ ಮತ್ತು ಸುದ್ದಿ ಸಂಸ್ಥೆಗಳು ಆ ಟೀಕೆಗಳನ್ನು ವರದಿ ಮಾಡಿವೆ.

14. ಜಾಮೀನು ಪ್ರಕ್ರಿಯೆಗಳು, ಸಂಪೂರ್ಣ ಕ್ರಿಮಿನಲ್ ವಿಚಾರಣೆಗಿಂತ ಭಿನ್ನವಾಗಿ, ಪ್ರಕರಣದ ಅರ್ಹತೆಯ ಮೇಲೆ ಪ್ರಾಥಮಿಕ ದೃಷ್ಟಿಕೋನವನ್ನು ರೂಪಿಸುವ ಕಾರ್ಯದೊಂದಿಗೆ ಹೊರೆಯಾಗಿರುವುದನ್ನು ಗಮನಿಸಬೇಕು. ಸಾಕ್ಷ್ಯಾಧಾರಗಳನ್ನು ಸಂಪೂರ್ಣವಾಗಿ ವಿಶ್ಲೇಷಿಸದಿರುವಾಗ ಆರೋಪಿಗಳ ಪರವಾಗಿ ನಿರ್ದೋಷತ್ವದ ಪೂರ್ವಭಾವನೆ ಇನ್ನೂ

ಚಾಲ್ತಿಯಲ್ಲಿರುವಾಗ, ನ್ಯಾಯಾಲಯಗಳು ಆರೋಪಿಗಳ ವಿರುದ್ಧ ಪ್ರತಿಕೂಲ ಷರಾಗಳನ್ನು ಹೊರಡಿಸುವಾಗ ಅತ್ಯಂತ ಜಾಗರೂಕರಾಗಿರಬೇಕು. ಈ ರೀತಿಯ ಷರಾಗಳನ್ನು ಯಾವ ಪಕ್ಷಕಾರನ ವಿರುದ್ಧ ಹೊರಡಿಸಿದಿಯೋ, ಒಂದು ವೇಳೆ ಆ ಪಕ್ಷಕಾರನು ಸದರಿ ಪ್ರಕ್ರಿಯೆಗಳಲ್ಲಿ ಯಾವುದೇ ಮೊಕದ್ದಮೆಯನ್ನು ಹೊಂದಿರದ ಸಂದರ್ಭಗಳಲ್ಲಿ ಇದು ವಿಶೇಷವಾಗಿ ಮುಖ್ಯವಾಗಿದೆ, ಅಂತಹ ಷರಾಗಳು, ವಿಶೇಷವಾಗಿ ಸಾಂವಿಧಾನಿಕ ನ್ಯಾಯಾಲಯಗಳು ಹೊರಡಿಸಿದರೆ, ಅಂತಹ ಟೀಕೆಗಳ ಸ್ವೀಕರಿಸುವ ಕೊನೆಯಲ್ಲಿ ಪಕ್ಷಕಾರರ ಪ್ರತಿಷ್ಠೆಗೆ ದೊಡ್ಡ ಹಾನಿಯನ್ನು ಉಂಟುಮಾಡಬಹುದು. ನ್ಯಾಯಾಲಯಗಳ ಮೇಲಿನ ಈ ಎಚ್ಚರಿಕೆಯ ಹೊರೆಯನ್ನು ಈ ನ್ಯಾಯಾಲಯದ ತೀರ್ಪುಗಳ ಸರಣಿಯಲ್ಲಿ (ಕಾಟೇನಾದಲ್ಲಿ) ಹೇಳಲಾಗಿದೆ.

15. ನಿರಂಜನ್ ಪಟ್ನಾಯಕ್ ವಿರುದ್ಧ ಶಶಿಭೂಷಣ್ ಕರ್ [1] ಪ್ರಕರಣದಲ್ಲಿ, ಈ ನ್ಯಾಯಾಲಯವು, ಉಚ್ಚ ನ್ಯಾಯಾಲಯ ಮಾಡಿದ ಕೆಲವು ಷರಾಗಳನ್ನು ಪರಿಶೀಲಿಸುವಾಗ, ನ್ಯಾಯಾಲಯಗಳು ಪ್ರತಿಕೂಲ ಷರಾಗಳನ್ನು ನೀಡುವಾಗ ಅತ್ಯಂತ ಜಾಗರೂಕರಾಗಿರಬೇಕು ಮತ್ತು ನ್ಯಾಯದಾನಕ್ಕಾಗಿ ಒಂದು ವೇಳೆ ನ್ಯಾಯೋಚಿತ ತೀರ್ಮಾನಕ್ಕೆ ಬರುವ ಅವಶ್ಯಕತೆ ಇದ್ದಲ್ಲಿ ಮಾತ್ರ ಅಂತಹ ಷರಾಗಳನ್ನು ಹೊರಡಿಸಲು ಅವಲಂಬಿಸಬೇಕು ಎಂದು ಹೇಳಿದೆ.

ಸದರಿ ತೀರ್ಪಿನ ಸಂಬಂಧಿತ ಕಂಡಿಕೆಯನ್ನು ಇಲ್ಲಿ ಆಯ್ದು ಹೊರತೆಗೆಯಲಾಗಿದೆ :

> *"ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ, ನ್ಯಾಯಾಧೀಶರು ಮತ್ತು ದಂಡಾಧಿಕಾರಿಗಳು ನ್ಯಾಯ, ನ್ಯಾಯೋಚಿತ ವರ್ತನೆ ಮತ್ತು ಸಂಯಮದ (...) ಪರಿಗಣನೆಯಿಂದ ಮಾರ್ಗದರ್ಶಿಸಲ್ಪಡಬೇಕು, ನ್ಯಾಯಾಧೀಶರು ಸಾಮಾನ್ಯವಾಗಿ ಸಮಚಿತ್ತ, ಸಂಯಮ ಮತ್ತು ಶಾಂತತೆಯಿಂದ ಹೊರಗುಳಿಯಬಾರದು ಮತ್ತು ಅವಿಭಾಜ್ಯ ಅಂಗವಾಗಿ ಪ್ರಕರಣದ ನಿರ್ಧಾರಕ್ಕೆ ನಿಜವಾಗಿಯೂ ಅಗತ್ಯವಿಲ್ಲದಿದ್ದರೆ, ಪಕ್ಷಕಾರರ ಅಥವಾ ಪ್ರಾಧಿಕಾರಗಳ ವಿರುದ್ಧ ಕಠಿಣ ಅಥವಾ ಅವಹೇಳನಕಾರಿ ಷರಾಗಳನ್ನು ಮಾಡಬಾರದು"*

---

1. (1986) 2 SCC 569

16. ಮಧ್ಯಪ್ರದೇಶ ರಾಜ್ಯ ವಿರುದ್ಧ ನಂದಲಾಲ್ ಜೈಸ್ವಾಲ್ 2 ಪ್ರಕರಣದಲ್ಲಿ, ಈ ನ್ಯಾಯಾಲಯವು, ರಾಜ್ಯದ ಅಧಿಕಾರಿಗಳ ವಿರುದ್ಧ ಉಚ್ಚ ನ್ಯಾಯಾಲಯವು ಮಾಡಿದ ಕೆಲವು ಅವಹೇಳನಕಾರಿ ಷರಾಗಳನ್ನು ಪರಿಶೀಲಿಸುತ್ತಾ , ಸದರಿ ಪ್ರಕರಣವು ಎತ್ತಿಹಿಡಿಯುವುದೇನೆಂದರೆ, ನ್ಯಾಯಾಧೀಶರು ಪ್ರತಿಕೂಲ ಷರಾಗಳನ್ನು ಹೊರಡಿಸುವುದನ್ನು ತಡೆಯಬೇಕು, ಏಕೆಂದರೆ ಅದು ದೊಡ್ಡ ಹಾನಿಯನ್ನು ಉಂಟುಮಾಡಬಹುದು ಮತ್ತು ನ್ಯಾಯವನ್ನು ಸಾಧಿಸುವುದಕ್ಕೆ ವಿರುದ್ಧವಾಗಿ ಪರಿಣಮಿಸಬಹುದು. ಮೇಲಿನ ತೀರ್ಪಿನ ಸಂಬಂಧಿತ ಅವಲೋಕನವನ್ನು ಇಲ್ಲಿ ಪುನರುಚ್ಚರಿಸಲಾಗುತ್ತಿದೆ:

> *"ಪಕ್ಷಕಾರರ ನಡವಳಿಕೆಯನ್ನು ಅಥವಾ ಅವರ ಸಾಕ್ಷಿಗಳನ್ನು ಟೀಕಿಸುವಾಗ ನ್ಯಾಯಾಧೀಶರು ಕಟುವಾದ ಮತ್ತು ನಿಂದಿಸುವ ಭಾಷೆಯನ್ನು ಬಳಸಬಾರದು ಎಂದು ನಾವು ಉಪಸಂಹಾರದಲ್ಲಿ ಗಮನಿಸಬಹುದು. ಅವರು ಸಂಯಮ, ಸಾವಧಾನ ಮತ್ತು ನಿಗ್ರಹದಿಂದ ವರ್ತಿಸಬೇಕು. ಅವರು ದೋಷರಹಿತರಲ್ಲ ಎಂದು ಗುರುತಿಸುವ ನಮ್ರತೆಯನ್ನು ಹೊಂದಿರಬೇಕು ಮತ್ತು ಯಾವುದೇ ಪಕ್ಷಕಾರ ವಿರುದ್ಧ ಅವರು ಹೊರಡಿಸಿದ ಯಾವುದೇ ಕಠಿಣ ಮತ್ತು ಅವಹೇಳನಕಾರಿ ಆಕ್ಷೇಪಣೆಗಳು ತಪ್ಪಾಗಿ ಮತ್ತು ನ್ಯಾಯಸಮ್ಮತವಲ್ಲದಿರಬಹುದು ಮತ್ತು ಹಾಗೆ ಆದಲ್ಲಿ, ಅದರಿಂದ ಗಣನೀಯ ಹಾನಿ ಆಗಬಹುದು ಮತ್ತು ಕೆಡಕು ಆಗಬಹುದು ಮತ್ತು ಅನ್ಯಾಯಕ್ಕೆ ಕಾರಣವಾಗುತ್ತದೆ. ಇಲ್ಲಿ, ಪ್ರಸ್ತುತ ಪ್ರಕರಣದಲ್ಲಿ, ಬಿ.ಎಂ. ಲಾಲ್, ನ್ಯಾ. ರವರಿಂದ ಮಾಡಲಾದ ಅವಲೋಕನಗಳು ಮತ್ತು ಹೊರಡಿಸಿದ ಆಕ್ಷೇಪಣೆಗಳು ಸಂಪೂರ್ಣವಾಗಿ ನ್ಯಾಯಸಮ್ಮತವಲ್ಲದ ಮತ್ತು ಅನಪೇಕ್ಷಿತವಾಗಿರುತ್ತವೆ ಮತ್ತು ಅವರು ಅವುಗಳನ್ನು ಮಾಡಬಾರದಾಗಿತ್ತು."*

---

2. (1986) 4 SCC 566

17. **ಇದಲ್ಲದೆ, ಭಾರತದ ಚುನಾವಣಾ ಆಯೋಗ ವಿರುದ್ಧ ಎಂ.ಆರ್. ವಿಜಯಭಾಸ್ಕರ್ 3 ಪ್ರಕರಣದಲ್ಲಿ**, ಉಚ್ಚ ನ್ಯಾಯಾಲಯವು ಮಾಡಿದ ಕೆಲವು ಪ್ರತಿಕೂಲ ಷರಾಗಳನ್ನು ಪರಿಶೀಲಿಸುವಾಗ, ಸದರಿ ಪ್ರಕರಣವು ಎತ್ತಿಹಿಡಿದಿರುವುದೇನೆಂದರೆ, ನ್ಯಾಯಾಧೀಶರು ನ್ಯಾಯಾಲಯದಲ್ಲಿ ತಪ್ಪಾದ ವ್ಯಾಖ್ಯಾನಕ್ಕೆ ಗುರಿಯಾಗಬಹುದಾದ ಷರಾಗಳನ್ನು ಹೊರಡಿಸುವಾಗ ತೀವ್ರ ಎಚ್ಚರಿಕೆ ವಹಿಸಬೇಕು. ಈ ತೀರ್ಪಿನ ಸಂಬಂಧಿತ ಕಂಡಿಕೆಯನ್ನು ಇಲ್ಲಿ ನೀಡಲಾಗಿದೆ:

> *"ಹೇಳಲಾಗಿರುವಂತೆ, ನ್ಯಾಯಾಧೀಶರು ತೆರೆದ ನ್ಯಾಯಾಲಯದಲ್ಲಿ ತಪ್ಪಾದ ವ್ಯಾಖ್ಯಾನಕ್ಕೆ ಗುರಿಯಾಗಬಹುದಾದ ಷರಾಗಳನ್ನು ಮಾಡುವಾಗ ಜಾಗರೂಕರಾಗಿರಬೇಕಾದ ಅಗತ್ಯವನ್ನು ನಾವು ಒತ್ತಿಹೇಳಬೇಕು. ನ್ಯಾಯ ಪೀಠದಲ್ಲಿ ಮತ್ತು ತೀರ್ಪುಗಳಲ್ಲಿ ಭಾಷೆಯು ನ್ಯಾಯಾಂಗದ ಔಚಿತ್ಯಕ್ಕೆ ಅನುಗುಣವಾಗಿರಬೇಕು. ಭಾಷೆಯು ಸಂವಿಧಾನಾತ್ಮಕ ಮೌಲ್ಯಗಳಿಗೆ ಸಂವೇದನಾಶೀಲವಾಗಿರುವುದು ನ್ಯಾಯಾಂಗ ಪ್ರಕ್ರಿಯೆಯ ಪ್ರಮುಖವಾದ ಸಾಧನವಾಗಿದೆ. ನ್ಯಾಯಾಂಗ ಭಾಷೆಯು ಸಾಂವಿಧಾನಿಕ ನೀತಿಗೆ ಸಂವೇದನಾಶೀಲ ಆತ್ಮಸಾಕ್ಷಿಯ ಕಿಟಕಿಯಾಗಿದೆ. ಅದರ ಕಡಿಮೆಗೊಳಿಸಲಾದ ಸಮತೋಲನದ ಕೊರತೆಯಿಂದಾಗಿ, ಭಾಷೆಯು ಮಾನವ ಘನತೆಯ ರಕ್ಷಕನಾಗಿ ಅದರ ಸಂಕೇತವನ್ನು ಕಳೆದುಕೊಳ್ಳುವ ಅಪಾಯವನ್ನುಂಟುಮಾಡುತ್ತದೆ. ಸಂವಿಧಾನದ ಅಡಿಯಲ್ಲಿ ನ್ಯಾಯಾಂಗ ಪರಿಶೀಲನೆಯ ಅಧಿಕಾರವನ್ನು ಉಚ್ಚ ನ್ಯಾಯಾಲಯಗಳಿಗೆ ವಹಿಸಲಾಗಿದೆ. ಅದರ ಆಧಾರ ಪೀಠವು ಎಷ್ಟು ಎತ್ತರವಾಗಿದೆ ಎಂದರೆ ಅದು ಸಂವಿಧಾನದ ಮೂಲಭೂತ ಲಕ್ಷಣಗಳ ಒಂದು ಭಾಗವಾಗಿದೆ. ಆದರೂ ಜವಾಬ್ದಾರಿಯು ಅಧಿಕಾರವನ್ನು ವಹಿಸಿಕೊಳ್ಳುವ ಸ್ವರೂಪ ಮತ್ತು ಆಯಾಮಗಳೊಂದಿಗೆ ನೇರವಾದ ಸಹ-ಸಂಬಂಧವನ್ನು ಹೊಂದಿದೆ. ಉಚ್ಚ ನ್ಯಾಯಾಲಯದ ಒಂದು ಹಂತದ ಎಚ್ಚರಿಕೆ ಮತ್ತು ಪರಿವೀಕ್ಷಣೆಯು ಪ್ರಸ್ತುತ ಪ್ರಕರಣದಲ್ಲಿ ಕೇಳಿಕೊಂಡಿರುವ ಸ್ವಭಾವದ ಕೊರತೆಯನ್ನು ನಿವಾರಿಸುತ್ತದೆ. ವಿಚಾರಣೆಯ ಸಮಯದಲ್ಲಿ ಮೌಖಿಕ ಅವಲೋಕನಗಳು ಕ್ಷಣದೊಂದಿಗೆ ಹಾದುಹೋಗಿವೆ ಮತ್ತು ಅವುಗಳು ದಾಖಲೆಯ ಭಾಗವಾಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಚುನಾವಣಾ ಆಯೋಗವು, ಚುನಾವಣಾ ಪ್ರಜಾಪ್ರಭುತ್ವದ*

3.(2021)9 SCC 770

ಪಾವಿತ್ರ್ಯವನ್ನು ಖಾತ್ರಿಪಡಿಸುವಲ್ಲಿ ಮಹತ್ವದ ಹೊರೆಯನ್ನು ಹೊರುವ ಸ್ವತಂತ್ರ ಸಂವಿಧಾನಾತ್ಮಕ ಸಂಸ್ಥೆಯಾಗಿದೆ. ನಾವು ತರಲು ಪ್ರಯತ್ನಿಸಿದ ಸಮತೋಲನದ ಪ್ರಜ್ಞೆಯೊಂದಿಗೆ ಈ ವಿಷಯವು ಕೊನೆಗೊಳ್ಳುತ್ತದೆ ಎಂದು ನಾವು ಭಾವಿಸುತ್ತೇವೆ."

18. ಮೇಲ್ಕಂಡ ನಿರ್ಧಾರಗಳ ದೃಷ್ಟಿಯಿಂದ, ಮೇಲ್ಮನವಿದಾರ ಸಂಖ್ಯೆ 2 ರವರಿಗೆ ಸಂಬಂಧಿಸಿದಂತೆ, ಅವರ ವಿರುದ್ಧ ಉಚ್ಚನ್ಯಾಯಾಲಯವು ಮಾಡಿದ ಷರಾಗಳು ಅಸಮಂಜಸ ಮತ್ತು ನ್ಯಾಯಸಮ್ಮತವಲ್ಲದಂತೆ ತೋರುತ್ತವೆ. ಮೇಲ್ಮನವಿದಾರ ಸಂಖ್ಯೆ 2 ರವರು ಕೇವಲ ತನಿಖೆ ನಡೆಸುತ್ತಿರುವ ಇಲಾಖೆಯ ಸರ್ಕಾರಿ ನೌಕರನಾಗಿದ್ದು, ಪ್ರಕರಣದಲ್ಲಿ ಯಾವುದೇ ವೈಯಕ್ತಿಕ ಸಂಬಂಧ ಹೊಂದಿರುವುದಿಲ್ಲ ಮೇಲ್ಮನವಿದಾರ ಸಂಖ್ಯೆ 2 ರವರು ಆರೋಪಿಯಲ್ಲ ಮತ್ತು ಅಪರಾಧದ ನಡವಳಿಗೂ, ಜಾಮೀನು ಪ್ರಕ್ರಿಯೆಗಳಿಗೂ ಯಾವುದೇ ಸಂಬಂಧವಿಲ್ಲ. ಅವರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯವು ವಿಶ್ಲೇಷಿಸಿಲ್ಲ ಮತ್ತು ಸ್ವತಃ ವಿವರಿಸಲು ಅವರಿಗೆ ಯಾವುದೇ ಅವಕಾಶವನ್ನು ನೀಡಲಾಗಿಲ್ಲ, ಆದಾಗ್ಯೂ, ಅವರ ವಿರುದ್ಧ ಕಟುವಾದ ಮತ್ತು ಅತಿಶಯವಾದ ಷರಾಗಳನ್ನು ಹೊರಡಿಸಲಾಗಿದೆ. ಅಂತಹ ಸನ್ನಿವೇಶದಲ್ಲಿ, ಉಚ್ಚನ್ಯಾಯಾಲಯವು ಹೊರಡಿಸಿದ ಷರಾಗಳು ವಿಲಕ್ಷಣವಾಗಿದೆಯೇ ಹೊರತು ನ್ಯಾಯದ ಹಿತಾಸಕ್ತಿಯಿಂದಲ್ಲ.

19. ಮೇಲ್ಮನವಿದಾರ ಸಂಖ್ಯೆ 3 ರವರಿಗೆ ಸಂಬಂಧಿಸಿದಂತೆ, ಅವರು ಆಪಾದಿಸಲಾದ ಅಪರಾಧದಲ್ಲಿ ಆರೋಪಿಯಾಗಿದ್ದರೂ ಸಹ, ಅವರು ಜಾಮೀನು ಪ್ರಕ್ರಿಯೆಯಲ್ಲಿ ಯಾವುದೇ ಮೊಕದ್ದಮೆಯನ್ನು ಹೊಂದಿಲ್ಲ ಎಂಬ ಅಂಶವನ್ನು ಮರೆಯಬಾರದು, ಹಾಗೂ ಅದು ಪ್ರತಿವಾದಿ ಸಂಖ್ಯೆ 1 ರವರಿಗೆ ವಿಶೇಷವಾಗಿತ್ತು. ಅಂತಹ ಸನ್ನಿವೇಶದಲ್ಲಿ, ಮೇಲ್ಮನವಿದಾರ ಸಂಖ್ಯೆ 3 ರವರು ನಡೆಯುತ್ತಿರುವ ಜಾಮೀನು ಪ್ರಕ್ರಿಯೆಯಲ್ಲಿ ಪಕ್ಷಕಾರರಾಗಿರಲಿಲ್ಲ, ಉಚ್ಚ ನ್ಯಾಯಾಲಯವು ಅವರ ವಿರುದ್ಧ ಇಂತಹ ಪ್ರತಿಕೂಲ ಷರಾಗಳನ್ನು ಹೊರಡಿಸಿರುವುದು ಅತ್ಯಂತ ಅಸಮಂಜಸವಾಗಿದೆ ಎಂದು ನಾವು ಕಂಡುಕೊಂಡಿದ್ದೇವೆ.

20. ಪ್ರತಿವಾದಿ ಸಂಖ್ಯೆ 1 ರ ಜಾಮೀನು ಪ್ರಕ್ರಿಯೆಯಲ್ಲಿ, ಅಪೀಲುದಾರ ಸಂಖ್ಯೆ 3 ರವರು ಪಕ್ಷಕಾರರಾಗಿಲ್ಲದ ಕಾರಣ, ನ್ಯಾಯಾಲಯಕ್ಕೆ ಅವರ ಸಲ್ಲಿಕೆಗಳನ್ನು ದಾಖಲೆಯಲ್ಲಿ ಇರಿಸಲು ಅವರಿಗೆ ಅವಕಾಶವಿರಲಿಲ್ಲ. ಮೇಲ್ಮನವಿದಾರ ಸಂಖ್ಯೆ 3 ರ ವಿರುದ್ಧ ಯಾವುದೇ ನಿಖರ ಆರೋಪಗಳನ್ನು ಉಚ್ಚನ್ಯಾಯಲಯದಲ್ಲಿ ಮಾಡಿರುವುದಿಲ್ಲ, ಜಾಮೀನು ಪ್ರಕ್ರಿಯೆಗಳು ಮತ್ತು ಜಾಮೀನು ಪ್ರಕ್ರಿಯೆಗಳ ಮುಂದುವರಿಕೆಯಲ್ಲಿ ವಕೀಲರ ಸಲ್ಲಿಕೆಗಳು, ಪ್ರತಿವಾದಿ ಸಂಖ್ಯೆ 1 ರವರಿಗೆ ಮಾತ್ರ ಸೀಮಿತವಾಗಿರುತ್ತವೆ. ಈ ಸಂದರ್ಭದಲ್ಲಿ, ಮೇಲ್ಮನವಿದಾರ ಸಂಖ್ಯೆ 3 ರ ವಿರುದ್ಧ ಯಾವುದೇ ಆರೋಪಗಳನ್ನು ಮಾಡದಿದ್ದಾಗ, ನಿರ್ದೋಷತ್ವದ ಪೂರ್ವಭಾವನೆ ಇನ್ನೂ ಮೇಲ್ಮನವಿದಾರ ಸಂಖ್ಯೆ 3 ರ ಪರವಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಅವರ ವಿರುದ್ಧ ಅಂತಹ ಪ್ರತಿಕೂಲ ಷರಾಗಳನ್ನು ಹೊರಡಿಸುವುದಕ್ಕೆ ಕಾನೂನು ಪ್ರಕ್ರಿಯೆಯ ಘೋರ ದುರ್ಬಳಕೆ ಇದೆ ಎಂದು ನಾವು ಕಂಡುಕೊಂಡಿದ್ದೇವೆ, ಏಕೆಂದರೆ ಅಂತಹ ಷರಾಗಳು ಅವರ ಪ್ರತಿಷ್ಠೆಗೆ ಹಾನಿಯನ್ನು ಉಂಟುಮಾಡುವುದಷ್ಟೇ ಅಲ್ಲ, ಆದರೆ ಅವರ ನಿಜವಾದ ವಿಚಾರಣೆಗೆ ದೊಡ್ಡ ಪೂರ್ವಾಗ್ರಹವನ್ನು ಉಂಟುಮಾಡುವ ಸಾಮರ್ಥ್ಯವನ್ನು ಸಹ ಹೊಂದಿದೆ.

<u>ಪ್ರಶ್ನೆ II- ಪ್ರತಿವಾದಿ ಸಂಖ್ಯೆ 1 ರ ಜಾಮೀನು ಪ್ರಕ್ರಿಯೆಯಲ್ಲಿ, ಮೇಲ್ಮನವಿದಾರ ಸಂಖ್ಯೆ 2 ರ ವಿರುದ್ಧ ವರದಿಗಳನ್ನು ಕೇಳಲು ಉಚ್ಚ ನ್ಯಾಯಾಲಯವು ನೀಡಿದ ನಿರ್ದೇಶನವನ್ನು ತೆಗೆದುಹಾಕತಕ್ಕದ್ದೇ?</u>

21. ಮೇಲೆ ತಿಳಿಸಿದಂತೆ, ಆಪಾದಿತ ಅಪರಾಧದ ತನಿಖೆಯನ್ನು ನಿರ್ವಹಿಸುತ್ತಿರುವ ಸಂಸ್ಥೆಯ ಉದ್ಯೋಗಿಯಾಗಿರುವ ಮೇಲ್ಮನವಿದಾರ ಸಂಖ್ಯೆ 2, ಮೇಲೆ ತಿಳಿಸಲಾದ ಜಾಮೀನು ಪ್ರಕ್ರಿಯೆಯಲ್ಲಿ ಯಾವುದೇ ಮೊಕದ್ದಮೆಯನ್ನು ಹೊಂದಿರಲಿಲ್ಲ. ಉಚ್ಚ ನ್ಯಾಯಾಲಯವು ಮೌಖಿಕ ಸಮನ್ಸ್ ಮೂಲಕ ಮೇಲ್ಮನವಿದಾರ ಸಂಖ್ಯೆ 2 ರ ಉಪಸ್ಥಿತಿಯನ್ನು ನಿರ್ದೇಶಿಸಿತು, ಅದನ್ನು ಅವರು ಪಾಲಿಸಿದರು. ಸಮನ್ಸ್ ನೀಡಿದ ನಂತರ, ಉಚ್ಚ ನ್ಯಾಯಾಲಯವು, ಮೇಲ್ಮನವಿದಾರ ಸಂಖ್ಯೆ 2 ರ ವಿವರಣೆಗೆ ಅವಕಾಶ ನೀಡದೆ, ಮತ್ತು ಸರಿಯಾದ ಕಾರ್ಯವಿಧಾನವನ್ನು ಅನುಸರಿಸದೆ, ಮೇಲ್ಮನವಿದಾರ 2 ರ ವಿರುದ್ಧ ವರದಿಗಳನ್ನು ಸಲ್ಲಿಸಲು

ಸಿ.ಬಿ.ಐ. ವಕೀಲರಿಗೆ ನಿರ್ದೇಶನ ನೀಡಿತು. ಪುನರಾವರ್ತನೆಯ ಸಲುವಾಗಿ, ಇವೆಲ್ಲವೂ ಕಲಂ 439 ಸಿ.ಆರ್.ಪಿ.ಸಿ. ಪ್ರಕ್ರಿಯೆಯೊಳಗೆ ನಡೆದಿವೆ ಹಾಗೂ ಅದು ಸಹ ಆರೋಪಿಗೆ ಸಂಬಂದವಿಲ್ಲದ ವ್ಯಕ್ತಿಯ ವಿರುದ್ಧ ನಡೆದಿವೆ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು.

22. RBI ವಿರುದ್ಧ ಸಹಕಾರಿ ಬ್ಯಾಂಕ್ ಠೇವಣಿ A/ C ಹೆಚ್ ಆರ್. ಷಾ 4 ಪ್ರಕರಣದಲ್ಲಿ, ಸಿ.ಆರ್.ಪಿ.ಸಿ ಯ ಕಲಂ 439 ರ ಅಡಿಯಲ್ಲಿ ಅರ್ಜಿಯ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯವು ನೀಡಿದ ಆದೇಶವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಶ್ನಿಸಿದೆ, ಇದರಲ್ಲಿ ಆರೋಪಿಗಳಿಂದ ವಸೂಲಿ ಮಾಡಿದ ಹಣವನ್ನು ವಿತರಿಸಲು ಬ್ಯಾಂಕ್‌ಗೆ ನಿರ್ದೇಶನಗಳನ್ನು ನೀಡಲಾಗಿದೆ. ಈ ನ್ಯಾಯಾಲಯವು ಈ ನಿರ್ದೇಶನಗಳನ್ನು ಪರಿಶೀಲಿಸುವಾಗ ಜಾಮೀನು ನಿರ್ಧರಿಸುವ ಉದ್ದೇಶಗಳಿಗಾಗಿ ಸಂಬಂಧಿಸಿದ ವಿಷಯಗಳಿಗೆ ಉಚ್ಚ ನ್ಯಾಯಲಯವು ತನ್ನನ್ನು ಪರಿಮಿತಗೊಳಿಸಬೇಕು ಎಂದು ಅಭಿಪ್ರಾಯಪಟ್ಟಿದೆ. ಈ ನ್ಯಾಯಾಲಯದ ಸಂಬಂಧಿತ ಅವಲೋಕನವನ್ನು ಇಲ್ಲಿ ಆಯ್ದು ಹೊರತೆಗೆಯಲಾಗಿದೆ:

> *"ಉಚ್ಚ ನ್ಯಾಯಾಲಯದ ನಿರ್ದೇಶನಗಳ ದೂರಗಾಮಿ ಪರಿಣಾಮಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 439 ರ ಅಡಿಯಲ್ಲಿ ಆರೋಪಿಯು ಸಲ್ಲಿಸಿದ ಜಾಮೀನು ಅರ್ಜಿಯ ವ್ಯಾಪ್ತಿಯನ್ನು ಮೀರಿವೆ ಹಾಗೂ ಉಚ್ಚ ನ್ಯಾಯಾಲಯವು, ಬೇರೆಯವರಂತೆ, ತನ್ನ ಮುಂದಿರುವ ವಿಷಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಸೀಮಿತವಾಗಿರಬೇಕೆಂದು ನಾವು ಅಭಿಪ್ರಾಯಪಟ್ಟಿದ್ದೇವೆ. ಹೀಗಾಗಿ ದೇಶದಾದ್ಯಂತ ಬ್ಯಾಂಕುಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುವ ಆದೇಶಗಳನ್ನು ಹೊರಡಿಸಲು ಉಚ್ಚ ನ್ಯಾಯಾಲಯವು ಮುಕ್ತವಾಗಿಲ್ಲ. ಈ ಕಾರಣಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಈ ಮೇಲ್ಮನವಿ ಸಲ್ಲಿಸಿದೆ ಎಂದು ಮೇಲ್ಮನವಿದಾರರ ಪರ ಹಿರಿಯ ವಕೀಲ ಶ್ರೀ ಬಸವ ಪ್ರಭು ಎಸ್.ಪಾಟೀಲ್ ತಿಳಿಸಿದ್ದಾರೆ."*

4. (2010)15 SCC 85.

23. ರಾಜ್ಯವನ್ನು ಪ್ರತಿನಿಧಿಸುವ ಪೋಲೀಸ್ ಇನ್ಸ್‌ಪೆಕ್ಟರ್ ವಿರುದ್ಧ ಎಂ. ಮುರುಗೇಶನ್ ಮತ್ತು ಮತ್ತೊಬ್ಬರು 5 ಪ್ರಕರಣದಲ್ಲಿ, ಪ್ರತ್ಯೇಕ ಯಾಂತ್ರಿಕ ವ್ಯವಸ್ಥೆ ಇರುವ ಪ್ರಕರಣಗಳಲ್ಲಿ, ನ್ಯಾಯಾಲಯವು ಅದರ ಅಂತರ್ಗತ ಅಧಿಕಾರದ ಅಡಿಯಲ್ಲಿ, ವಿಶೇಷವಾಗಿ ಜಾಮೀನು ಪ್ರಕ್ರಿಯೆಗಳ ಸಂದರ್ಭದಲ್ಲಿ, ಜಾಮೀನು ಮಂಜೂರು ಅಥವಾ ತಿರಸ್ಕಾರವನ್ನು ನಿರ್ಧರಿಸುವ ವ್ಯಾಪ್ತಿಯಿಂದ ಹೊರಗಿರುವ ನಿರ್ದೇಶನಗಳನ್ನು ನೀಡಲು ಸಾಧ್ಯವಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಈ ನ್ಯಾಯಾಲಯವು ಮಾಡಿದ ಸಂಬಂಧಿತ ಅವಲೋಕನಗಳನ್ನು ಇಲ್ಲಿ ಪುನರುಚ್ಚರಿಸಲಾಗುತ್ತಿದೆ:

> *"ರಾಜ್ಯದಲ್ಲಿ ಅಪರಾಧಿಕ ನ್ಯಾಯ ವ್ಯವಸ್ಥೆಯನ್ನು ಸುಧಾರಿಸುವ ನೆಪದಲ್ಲಿ ಯಾವುದೇ ಆದೇಶವನ್ನು ಹೊರಡಿಸಲು ನ್ಯಾಯಾಲಯವು ಅಂತರ್ಗತ ನ್ಯಾಯವ್ಯಾಪ್ತಿಯನ್ನು ಹೊಂದಿರುವಂತೆ, [ಜಾಮೀನು ಅರ್ಜಿಯ ನಿರ್ಧಾರದ ನಂತರ, ಏಕಸದಸ್ಯ ನ್ಯಾಯಾಧೀಶರು ರಾಜ್ಯದಿಂದ ದತ್ತಾಂಶವನ್ನು ಸಂಗ್ರಹಿಸಿದ್ದಾರೆ ಮತ್ತು ಅದನ್ನು ಆದೇಶದ ಭಾಗವಾಗಿಸಿದ್ದಾರೆ ಎಂದು ನಾವು ಕಂಡುಕೊಂಡಿದ್ದೇವೆ. **<u>ಸಂಹಿತೆಯ ಕಲಂ 439 ರ ಅಡಿಯಲ್ಲಿ ನ್ಯಾಯಾಲಯದ ನ್ಯಾಯವ್ಯಾಪ್ತಿಯು ವಿಚಾರಣೆಗೆ ಬಾಕಿ ಇರುವಾಗ ಜಾಮೀನು ನೀಡಲು ಅಥವಾ ನೀಡದಿರಲು ಸೀಮಿತವಾಗಿದೆ.</u>** ಗೌರವಾನ್ವಿತ ನ್ಯಾಯಾಧೀಶರ ಉದ್ದೇಶವು ಶ್ಲಾಘನೀಯವಾಗಿದ್ದರೂ ಸಹ, ಚಲಾಯಿಸಿದ ನ್ಯಾಯವ್ಯಾಪ್ತಿಯು ಸ್ಪಷ್ಟವಾಗಿ ತಪ್ಪಾಗಿದೆ. **<u>ಗೌರವಾನ್ವಿತ ನ್ಯಾಯಾಧೀಶರು ಮಾಡಿದ ಪ್ರಯತ್ನವನ್ನು ಸೂಕ್ತವಾದ ವೇದಿಕೆಯಲ್ಲಿ ಪ್ರಸ್ತುತಪಡಿಸಲು ಶೈಕ್ಷಣಿಕವಾಗಿ ಸರಿಯಾಗಿರಬಹುದು ಆದರೆ ಅಂತಹ ನಿರ್ದೇಶನಗಳನ್ನು ನ್ಯಾಯಾಲಯದ ಕಛೇರಿಯ ಅಡಿಯಲ್ಲಿ ನೀಡಲಾಗುವುದಿಲ್ಲ.</u>"*

24. ಇದಲ್ಲದೆ, **ಪಂಜಾಬ್ ರಾಜ್ಯ ವಿರುದ್ಧ ದೇವಿಂದರ್ ಪಾಲ್ ಸಿಂಗ್ ಭುಲ್ಲರ್ ಮತ್ತು ಇತರರು 6 ಪ್ರಕರಣದಲ್ಲಿ**,ಕ್ರಿಮಿನಲ್ ಮೇಲ್ಮನವಿಯನ್ನು ನಿರ್ಧರಿಸಿದ ನಂತರ, ಸಂಬಂಧವಿಲ್ಲದ

5.(2020)15 SCC 251

6.(2011)14 SCC 770

ಪ್ರಕರಣಗಳಲ್ಲಿ ಇತರ ಅಪರಾಧಿಗಳಿಗೆ ಸಂಬಂಧಿಸಿದಂತೆ ಆದೇಶಗಳನ್ನು ಹೊರಡಿಸುವುದನ್ನು ಉಚ್ಚ ನ್ಯಾಯಾಲಯವು ಮುಂದುವರಿಸಿದಾಗ, ಈ ನ್ಯಾಯಾಲಯವು ಪ್ರಸ್ತುತ ಇರುವ ಪ್ರಮುಖ ಪ್ರಕರಣದ ವ್ಯಾಪ್ತಿಯಿಂದ ಹೊರಗಿರುವ ನ್ಯಾಯವ್ಯಾಪ್ತಿಯ ಇಂತಹ ಮೊಕದ್ದಮೆ ಅನ್ಯಾಯವಾಗಿದೆ ಎಂದು ಎತ್ತಿಹಿಡಿದಿದೆ. ಸದರಿ ತೀರ್ಪಿನ ಸಂಬಂಧಿತ ಕಂಡಿಕೆಯನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆಃ

> *"ಅಂತರ್ಗತ ಶಕ್ತಿ ಎಂಬುದು ಪ್ಯಾಂಡೋರಾ ಪೆಟ್ಟಿಗೆಯನ್ನು ತೆರೆಯಲು ಇರುವ ಸರ್ವಶಕ್ತಿಯಲ್ಲ ಅದರಲ್ಲೂ ವಿವಾದಗಳಿಗೆ ಸಂಬಂಧಿಸಿದಂತೆ ಮುಖ್ಯ ಸಂದರ್ಭಕ್ಕೆ ಅವುಗಳು ಅಸಂಬದ್ಧವಾಗಿವೆ. ಅಧಿಕಾರದ ಆವಾಹನೆಯು ಒಂದು ಪ್ರಕ್ರಿಯೆಗೆ ಸಂಪರ್ಕ ಹೊಂದಿದ ಉದ್ದೇಶಕ್ಕಾಗಿ ಇರಬೇಕು ಮತ್ತು ಸಂಪೂರ್ಣವಾಗಿ ಹೊಸ ಸಮಸ್ಯೆಯನ್ನು ಮೊಳಕೆಯೊಡೆಯಲು ಅಲ್ಲ. ಅಧಿಕಾರವು ತನ್ನದೇ ಆದ ಸೃಷ್ಟಿಯನ್ನು ಮೀರಿ ತನ್ನದೇ ಆದ ಅಧಿಕಾರವನ್ನು ಮೀರುವಂತಿಲ್ಲ."*

25. ಮೇಲೆ ಉಲ್ಲೇಖಿಸಿದ ಅಂಶಗಳ ಹಿನ್ನೆಲೆಯಲ್ಲಿ, ಮೂರನೇ ವ್ಯಕ್ತಿಯ ಜಾಮೀನು ವಿಚಾರಣೆಯ ಸಮಯದಲ್ಲಿ ಉಚ್ಚ ನ್ಯಾಯಾಲಯದ ಕ್ರಮಗಳು ಸ್ಪಷ್ಟವಾಗಿ ನಿರಂಕುಶ, ಏಕಪಕ್ಷೀಯ ಹಾಗೂ ಅನ್ಯಾಯದಿಂದ ಕೂಡಿದೆ ಎಂದು ನಾವು ಭಾವಿಸುತ್ತೇವೆ ಮತ್ತು ಪ್ರತಿವಾದಿ ಸಂಖ್ಯೆ 1ರ ಜಾಮೀನನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಉಚ್ಚ ನ್ಯಾಯಾಲಯವು ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ತನ್ನನ್ನು ತಾನು ಸೀಮಿತಗೊಳಿಸಿಕೊಳ್ಳಬೇಕು. ಜಾಮೀನು ನ್ಯಾಯಾಲಯ, ವಿಶೇಷವಾಗಿ ಮೂರನೇ ವ್ಯಕ್ತಿಯಿಂದ ಜಾಮೀನು ಕೋರಿದ ಪ್ರಕರಣಗಳಲ್ಲಿ, ಒಬ್ಬ ಸಂಬಂಧವಿಲ್ಲದ ಪಕ್ಷಕಾರನ ಅರ್ಹತೆಗಳ ಆಧಾರದ ಮೇಲೆ ಆದೇಶವನ್ನು ಹೊರಡಿಸಲು ಎಲ್ಲಾ ಸಂಬಂಧಿತ ಮಾಹಿತಿಯನ್ನು ಹೊಂದಿರುವಂತಹ ನ್ಯಾಯಾಲಯವಾಗಿರುವುದಿಲ್ಲ, ಅಂತಹ ಆದೇಶವನ್ನು ಹೊರಡಿಸಿದರೆ, ಅಂತಹ ಆದೇಶವು ಸದರಿ ಪಕ್ಷಕಾರನಿಗೆ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ನಿಜವಾದ, ಅರ್ಥಪೂರ್ಣವಾದ ಅವಕಾಶವನ್ನು ನೀಡದೆ ಆ ಪಕ್ಷಕಾರನಿಗೆ ಹೆಚ್ಚಿನ ಹಾನಿಯನ್ನು ಉಂಟುಮಾಡುವ ಸಾಧ್ಯತೆಯಿದೆ. ಯಾವುದೇ ಪಕ್ಷಕಾರನು ಕಾನೂನು

ಬಾಹಿರ ಕೃತ್ಯದ ಆರೋಪಕ್ಕೆ ಒಳಗಾದಾಗ, ಆತನಿಗೆ ನ್ಯಾಯಯುತವಾಗಿ ವಿಚಾರಣೆಯ ಅವಕಾಶವನ್ನು ನೀಡಬೇಕು ಎಂಬುದು ಕಾನೂನಿನ ಸುಸ್ಥಾಪಿತ ತತ್ವವಾಗಿದೆ. ಅರ್ಥಪೂರ್ಣವಾಗಿ ವಿಚಾರಣೆಯ ಅವಕಾಶವನ್ನು ಮೇಲ್ಮನವಿದಾರ ಸಂಖ್ಯೆ 2 ರವರಿಗೆ ನೀಡಲಾಗಿಲ್ಲ ಮತ್ತು ಆದ್ದರಿಂದ ನಾವು ವಿವಾದ ಸಂಖ್ಯೆ 2 ನ್ನು ಮೇಲ್ಮನವಿದಾರ ಸಂಖ್ಯೆ 2 ರವರ ಪರವಾಗಿ ಎತ್ತಿ ಹಿಡಿದಿದ್ದೇವೆ.

<u>ಸಾರಾಂಶ</u>

26. ಸಾಮಾನ್ಯವಾಗಿ ಕಾನೂನು ವ್ಯವಸ್ಥೆ, ಮತ್ತು ನಿರ್ದಿಷ್ಟವಾಗಿ ನ್ಯಾಯಾಂಗ ವ್ಯವಸ್ಥೆಯು, ವರ್ಚುವಲ್ ವಿಚಾರಣೆಗಳ ಮತ್ತು ತೆರೆದ ನ್ಯಾಯಾಲಯದ ವಿಚಾರಣೆಗಳ ನೇರ ಪ್ರಸಾರಗಳನ್ನು ಅಳವಡಿಸಿಕೊಂಡಿರುವುದರಿಂದ ತಲುಪುವಿಕೆಯ ಮತ್ತು ಪಾರದರ್ಶಕತೆಯ ಹೊಸ ಯುಗಕ್ಕೆ ನಾಂದಿ ಹಾಡಿದೆ. ನ್ಯಾಯಾಂಗದಲ್ಲಿನ ಈ ಬದಲಾವಣೆಗಳು ನ್ಯಾಯಾಲಯಗಳು ಪರಿಹಾರ ಕಾರ್ಯವಿಧಾನಗಳಾಗಿ ಹಿಂದೆಂದಿಗಿಂತಲೂ ಹೆಚ್ಚು ಸಾಮಾನ್ಯ ಜನರಿಗೆ ಸುಲಭವಾಗಿ ಲಭ್ಯವಾಗುವುದನ್ನು ಖಚಿತಪಡಿಸಿವೆ. ಭೌತಿಕ ಮೂಲಸೌಕರ್ಯದ ಮಿತಿಗಳು, ನ್ಯಾಯಾಲಯಗಳನ್ನು ಭೌತಿಕ ಸ್ಥಾನಕ್ಕೆ ನಿರ್ಬಂಧಿಸಿದೆ ಹಾಗೂ ನ್ಯಾಯದ ಲಭ್ಯವಾಗುವಿಕೆಯ ಹಾದಿಯಲ್ಲಿನ ಮುಖ್ಯ ತಡೆಗಳಲ್ಲಿ ಒಂದಾಗಿದೆ. ಆದಾಗ್ಯೂ ತಂತ್ರಜ್ಞಾನದ ಲಭ್ಯತೆ ಮತ್ತು ಅದನ್ನು ಅಳವಡಿಸಿಕೊಳ್ಳುವುದರಿಂದ ಈ ಅಡಚಣೆಯನ್ನು ಈಗ ತೆರವುಗೊಳಿಸಲಾಗಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಹಿಂದೆಂದೂ ಪಾರದರ್ಶಕತೆಯನ್ನು ಕಂಡಿರಲಿಲ್ಲ, ಇದು ಹೆಚ್ಚಿನ ಪ್ರಯೋಜನಗಳನ್ನು ತರುತ್ತದಾದರೂ ಅಂತಹ ನ್ಯಾಯಾಲಯದ ವಿಚಾರಣೆಗಳನ್ನು ನಡೆಸುವಾಗ ನ್ಯಾಯಾಧೀಶರ ಜವಾಬ್ದಾರಿಯ ಕಟ್ಟುನಿಟ್ಟಾದ ಮಾನದಂಡವನ್ನು ಸಹ ಲಗತ್ತಿಸುತ್ತದೆ. ನ್ಯಾಯಾಲಯದಲ್ಲಿ ಮಂಡಿಸಲಾದ ಷರಾಗಳು, ನ್ಯಾಯಾಲಯದ ಕಲಾಪಗಳ ನೇರ ಪ್ರಸಾರದಿಂದಾಗಿ, ಈಗ ದೂರಗಾಮಿ ಪರಿಣಾಮಗಳನ್ನು ಹೊಂದಿವೆ, ಪ್ರಸ್ತುತ ಪ್ರಕರಣದಲ್ಲಿ ಕಂಡುಬರುವಂತೆ, ಇದರಲ್ಲಿ ಒಳಗೊಂಡಿರುವ ಪಕ್ಷಕಾರರ ಪ್ರತಿಷ್ಠೆಗೆ ದೊಡ್ಡ ಹಾನಿಯಾಗಬಹುದು. ಅಂತಹ ಸನ್ನಿವೇಶದಲ್ಲಿ, ಒಳಗೊಂಡಿರುವ ಪಕ್ಷಕಾರರ ವಿರುದ್ಧ

ಪ್ರತಿಕೂಲ ಷರಾಗಳನ್ನು ಹೊರಡಿಸುವಾಗ, ನ್ಯಾಯಾಲಯಗಳು ಅತ್ಯಂತ ಜಾಗರೂಕರಾಗಿರಬೇಕು ಮತ್ತು ನ್ಯಾಯದ ಉದ್ದೇಶಗಳನ್ನು ಪೂರೈಸಲು ಅಗತ್ಯವಿದ್ದರೆ ಮಾತ್ರ ಸರಿಯಾದ ವೇದಿಕೆಯಲ್ಲಿ ಸರಿಯಾದ ಸಮರ್ಥನೆಯೊಂದಿಗೆ ಅದನ್ನು ಮಾಡಬೇಕು.

27. ಮೇಲಿನ ಚರ್ಚೆಗಳ ಹಿನ್ನೆಲೆಯಲ್ಲಿ, ಮೇಲ್ಮನವಿದಾರರ ವಿರುದ್ಧ ಉಚ್ಚ ನ್ಯಾಯಾಲಯವು ಹೊರಡಿಸಿದ ಪ್ರತಿಕೂಲ ಷರಾಗಳನ್ನು ತೆಗೆದುಹಾಕುವುದು ಬಾಧ್ಯವಾಗಿರುತ್ತದೆ, ಆದರೆ ಆಕ್ಷೇಪಿಸಲಾದ ಮಧ್ಯಂತರ ಆದೇಶವನ್ನು ರದ್ದುಪಡಿಸಲು ಬಾಧ್ಯವಾಗಿರುತ್ತದೆ. ಅದರಂತೆ, 07.07.2022 ದಿನಾಂಕದ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ.

28. ಇದಲ್ಲದೇ, ಈ ನ್ಯಾಯಾಲಯವು ಅಂಗೀಕರಿಸಿದ 18.07.2022 ರ ಹಿಂದಿನ ಆದೇಶವನ್ನು ಗಮನದಲ್ಲಿಟ್ಟುಕೊಂಡು, ಪ್ರತಿವಾದಿ ಸಂಖ್ಯೆ 1 ರ ಜಾಮೀನು ಪ್ರಕ್ರಿಯೆಯು ಕೊನೆಗೊಂಡಿದೆ ಎಂದು ನಾವು ಭಾವಿಸುತ್ತೇವೆ. ಆದಾಗ್ಯೂ, ಜಾಮೀನು ಪ್ರಕ್ರಿಯೆಯ ಫಲಿತಾಂಶದ ಬಗ್ಗೆ ಯಾವುದೇ ಸೂಚನೆ ಇಲ್ಲದಿರುವುದರಿಂದ, ಅದನ್ನು ಈಗಾಗಲೇ ನಿರ್ಧರಿಸದಿದ್ದರೆ, ಈ ತೀರ್ಪಿನಿಂದ ಪೂರ್ವಾಗ್ರಹ ಅಥವಾ ಪ್ರಭಾವಕ್ಕೆ ಒಳಗಾಗದೇ ತನ್ನದೇ ಆದ ಅರ್ಹತೆಯ ಮೇರೆಗೆ ಕಾನೂನಿಗೆ ಅನುಗುಣವಾಗಿ ಜಾಮೀನು ಪ್ರಕ್ರಿಯೆಗಳನ್ನು ತ್ವರಿತವಾಗಿ ಮುಕ್ತಾಯಗೊಳಿಸುವಂತೆ ನಾವು ಉಚ್ಚ ನ್ಯಾಯಾಲಯವನ್ನು ವಿನಂತಿಸುತ್ತೇವೆ. ಅದರಂತೆ, ಮೇಲ್ಮನವಿಗಳನ್ನು ಅನುಮತಿಸಲಾಗಿದೆ.

..... ನ್ಯಾ.
(ಕೃಷ್ಣ ಮುರಾರಿ)

..... ನ್ಯಾ.
(ಅಹಸಾನುದ್ದೀನ್ ಅಮಾನುಲ್ಲಾ)

ನವ ದೆಹಲಿ;
21 ನೇ ಮಾರ್ಚ್, 2023

ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಮಗಳನ್ನು ಕಕ್ಷಿದಾರರು ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವುದಕ್ಕಾಗಿ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಮಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."